**ದಿನಾಂಕಃ 22.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1.ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನಾನು ಸಲ್ಲಿಸಿರುವ ಪ್ರಮಾಣ ಪತ್ರವನ್ನು ಪ್ರತಿವಾದಿಯು ಬರೆಸಿ ಕೊಟ್ಟಿರುತ್ತಾರೆ. ಪ್ರತಿವಾದಿಯು ಬರೆಸಿಕೊಟ್ಟು ಹಾಜರು ಪಡಿಸಿರುವ ಪ್ರಮಾಣ ಪತ್ರದ ವಿಚಾರಗಳು ನನಗೆ ಗೊತ್ತಿರುತ್ತದೆ. ಗೌರಮ್ಮ ರವರು ಸದರಿ ದಾವೆಯನ್ನು ಹಾಕಿರುತ್ತಾರೆ. ಜಮೀನು ಅವರಿಗೆ ಸೇರಿದ್ದು ಎಂಬುದಾಗಿ ಹೇಳಿ ದಾವೆ ಹಾಕಿರುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂ.111/2 ಆಗಿರುತ್ತದೆ. ಅದರ ವಿಸ್ತೀರ್ಣ 1 ಎಕರೆ 34 ಗುಂಟೆ ಇರುತ್ತದೆ. ಅದರ ಚಕ್ಕುಬಂದಿ ಪೂರ್ವಕ್ಕೆ ಕುನ್ನೇಗೌಡ, ಪಶ್ಚಿಮಕ್ಕೆ ಕೊಡುಗೆ ಜಮೀನು, ಉತ್ತರಕ್ಕೆ ಕುನ್ನೇಗೌಡರ ಜಮೀನು ಮತ್ತು ದಕ್ಷಿಣಕ್ಕೆ ಭಜನೆ ಮನೆ ಸ್ವಾಮಿಗೌಡರ ಸ್ವತ್ತು ಇರುತ್ತದೆ.

2. ನಾನು ಪ್ರಮಾಣ ಪತ್ರದಲ್ಲಿ ನನ್ನ ಸ್ವತ್ತು ದಾವಾ ಸ್ವತ್ತಿನ ಪಕ್ಕದಲ್ಲಿರುವುದಾಗಿ ಹೇಳಿದ್ದು ಅದು ಸದರಿ ಸ್ವತ್ತಿನ ದಕ್ಷಿಣಕ್ಕೆ ಬರುತ್ತದೆ. ನನ್ನ ಜಮೀನು ಸರ್ವೆ ನಂ.146/10 ಆಗಿರುತ್ತದೆ. ದಾವಾ ಸ್ವತ್ತು ದೊಡ್ಡಆಲಹಳ್ಳಿ ಗ್ರಾಮದಲ್ಲಿದೆ ಎಂದರೆ ಸರಿ. ನಾನು ಹಾಜರು ಪಡಿಸಿರುವ ಪಹಣಿಯ ಸ್ವತ್ತು ಉಯ್ಯಂಬಳ್ಳಿ ಗ್ರಾಮದಲ್ಲಿರುತ್ತದೆಂದರೆ ಸರಿ. ದೊಡ್ಡಆಲಹಳ್ಳಿ ಗ್ರಾಮದಲ್ಲಿರುವ ದಾವಾ ಸ್ವತ್ತಿಗೂ ಉಯ್ಯಂಬಳ್ಳಿ ಗ್ರಾಮದಲ್ಲಿರುವ ನನ್ನ ಸ್ವತ್ತಿಗು ಸರಿ ಸುಮಾರು 1 ಕಿ.ಮೀಟರ್ ಅಂತರವಿದೆ ಎಂದರೆ ಸಾಕ್ಷಿಯು ಅರ್ಧ ಕಿ.ಮೀಟರ್ ಇದೆ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತಿನ ಆಜುಪಾಜುದಾರನಾಗದೇ ಇದ್ದರೂ ಸಹಿತ ಈ ಸಂಬಂಧ ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದರೆ ಸರಿಯಲ್ಲ. ವಾದಿಗಳು ನಾನು ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ನನ್ನ ವಿರುದ್ದ ಯಾವುದೇ ದಾವೆ ಹಾಕಿರುವುದಿಲ್ಲ.

3. ದಾವಾ ಸ್ವತ್ತು ಮೂಲತಃ ಕೃಷ್ಣೇಗೌಡರಿಗೆ ಸೇರಿರುತ್ತದೆ. ವಾದಿ ಸರೋಜಮ್ಮರವರ ಮೂಲ ಪುರುಷ ಯಾರೆಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯ ಮೂಲ ಪುರುಷ ಯಾರು ಎಂದರೆ ಕೃಷ್ಣೇಗೌಡರೇ ಮೂಲ ಪುರುಷ ಎಂದು ನುಡಿಯುತ್ತಾರೆ. ಮೂಲತಃ

ದಾವಾ ಸ್ವತ್ತು 1ನೇ ವಾದಿಯ ಮಾವನವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತನ್ನು ಬೋಗ್ಯಕ್ಕೆ ಪಡೆದುಕೊಂಡಿರುತ್ತೇನೆಂದು ಬರೆಸಿರುವುದಿಲ್ಲ. ದಾವಾ ಸ್ವತ್ತಿನ ಪತ್ರಗಳು ಯಾರ ಹೆಸರಿನಲ್ಲಿವೆ ಎಂದು ನಾನು ನೋಡಿರುತ್ತೇನೆ. ಅದು ಕೃಷ್ಣೇಗೌಡರ ಹೆಸರಿನಲ್ಲಿರುತ್ತದೆ.

4. ದಾವಾ ಸ್ವತ್ತು ಯಾವ ವರ್ಷದಲ್ಲಿ ಪಡ ಬಿದ್ದಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಶುಲ್ಕ ಕಟ್ಟಿ ಯಾವ ವರ್ಷದಲ್ಲಿ ಪಡ ರೆಸ್ಟೋರ್ ಆಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಪಡ ರೆಸ್ಟೋರ್ ಆಗಿ 1ನೇ ವಾದಿಯ ಮಾವನಾದ ದೊಡ್ಡಲಿಂಗೇಗೌಡರ ಹೆಸರಿಗೆ ಬಂದಿರುತ್ತದೆಂದರೆ ಸಾಕ್ಷಿಯು ಕೃಷ್ಣೆಗೌಡರ ಹೆಸರಿಗೆ ಬಂದಿರುತ್ತದೆಂದು ನುಡಿಯುತ್ತಾರೆ. ನಾನು ಪ್ರತಿವಾದಿ ಸಂಬಂಧಿಕರು ಎಂದರೆ ಸರಿಯಲ್ಲ. ನಾನು ಪ್ರತಿವಾದಿ ಸಂಬಂಧಿಕರಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯಲು ಬಂದಿರುತ್ತೇನೆಂದೆ ಸರಿಯಲ್ಲ. ದಾವಾ ಸ್ವತ್ತು ಮೂಲತಃ 1ನೇ ವಾದಿಯ ಕುಟುಂಬಕ್ಕೆ ಸೇರಿರುತ್ತದೆ. ಅದರಲ್ಲಿ ಪ್ರತಿವಾದಿಗೆ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ ನನಗೆ ದಾವಾ ಸ್ವತ್ತಿನ ಬಗ್ಗೆ ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಮೂಲತಃ ವಾದಿಗಳ ಹೆಸರಿನಲ್ಲಿ ಇದ್ದು ಪ್ರತಿವಾದಿಗಳ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**